Akashvani: Bangalore
National Bulletin In Kannada
07.03.2026: 7.35AM

**ಆಕಾಶವಾಣಿ, ಬೆಂಗಳೂರು**

**ರಾಷ್ಟ್ರೀಯ ವಾರ್ತೆಗಳು**

07.03.2026: 7.35AM

********

**ಮುಖ್ಯಾಂಶಗಳು :**

1. ರೈಸಿನಾ ಸಂವಾದ; ವಿವಿಧ ದೇಶಗಳ ನಾಯಕರೊಂದಿಗೆ ವಿದೇಶಾಂಗ ಸಚಿವ ಡಾ. ಎಸ್. ಜೈಶಂಕರ್ ಮಾತುಕತೆ
2. ಸ್ಪೀಕರ್ ಓಂ ಬಿರ್ಲಾ ಪದಚ್ಯುತಗೊಳಿಸುವಂತೆ ಕೋರಿ ಲೋಕಸಭೆಯಲ್ಲಿ ಸೋಮವಾರ ನಿರ್ಣಯ ಮಂಡನೆ
3. ಯಾವುದೇ ಷರತ್ತುಗಳಿಲ್ಲದೆ ಶರಣಾಗುವಂತೆ ಇರಾನ್‌ಗೆ ಅಮೆರಿಕ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಆಗ್ರಹ
4. ಆಲ್ ಇಂಗ್ಲೆಂಡ್ ಒಪನ್ ಬ್ಯಾಡ್ಮಿಂಟನ್ ಚಾಂಪಿಯನ್‌ಶಿಪ್; ಪುರಷರ ಸಿಂಗಲ್ಸ್ ವಿಭಾಗದ ಸೆಮಿಫೈನಲ್‌ಗೆ ಭಾರತದ ಲಕ್ಷ್ಯ ಸೇನ್ ಲಗ್ಗೆ

**********

ನವದೆಹಲಿಯಲ್ಲಿ ನಡೆದ ರೈಸಿನಾ ಸಂವಾದ ೨೦೨೬ರ ಸಂದರ್ಭದಲ್ಲಿ ವಿದೇಶಾಂಗ ಸಚಿವ ಡಾ. ಎಸ್. ಜೈಶಂಕರ್ ಅವರು ವಿವಿಧ ದೇಶಗಳ ನಾಯಕರನ್ನು ಭೇಟಿಯಾಗಿ ಚರ್ಚಿಸಿದರು. ಶ್ರೀಲಂಕಾ, ಭೂತಾನ್, ಮಾರಿಷಸ್, ಕೀನ್ಯಾ, ಮಾಲ್ಡಾ, ಸೀಶೆಲ್ಸ್ ಮತ್ತು ರುವಾಂಡಾದ ವಿದೇಶಾಂಗ ಸಚಿವರೊಂದಿಗೆ ನಿನ್ನೆ ಡಾ. ಜೈಶಂಕರ್ ದ್ವಿಪಕ್ಷೀಯ ಮಾತುಕತೆ ನಡೆಸಿದರು. ಶ್ರೀಲಂಕಾದ ವಿದೇಶಾಂಗ ಸಚಿವೆ ವಿಜಿತಾ ಹೆರಾತ್ ಅವರೊಂದಿಗಿನ ಭೇಟಿಯ ಸಂದರ್ಭದಲ್ಲಿ, ಇಬ್ಬರು ನಾಯಕರು ದ್ವಿಪಕ್ಷೀಯ ಸಂಬಂಧಗಳು ಮತ್ತು ಪ್ರಾದೇಶಿಕ ಪರಿಸ್ಥಿತಿಯ ಕುರಿತು ಚರ್ಚೆ ನಡೆಸಿದರು. ಭೂತಾನಿನ ವಿದೇಶಾಂಗ ಸಚಿವ ಲಿಯಾನ್ಪೊ ಡಿ.ಎನ್.ಧುಂಗ್ಯೆಲ್ ಅವರೊಂದಿಗಿನ ಸಂವಾದದ ಸಂದರ್ಭದಲ್ಲಿ, ಇಬ್ಬರೂ ನಾಯಕರು ಭಾರತ-ಭೂತಾನ್ ನಡುವಿನ ವಿಶಿಷ್ಟ ಪಾಲುದಾರಿಕೆಯನ್ನು ಗಾಢಗೊಳಿಸುವ ಬದ್ಧತೆಯನ್ನು ಪುನರುಚ್ಚರಿಸಿದರು. ಮಾರಿಷಸ್ ವಿದೇಶಾಂಗ ಸಚಿವ ಧನಂಜಯ್ ರಿತೀಶ್ ರಾಮ್‌ಫುಲ್ ಅವರೊಂದಿಗಿನ ಭೇಟಿಯ ಸಂದರ್ಭದಲ್ಲಿ,

ಡಾ. ಜೈಶಂಕರ್ ಅವರು ಕಾರ್ಯತಂತ್ರದ ಪಾಲುದಾರಿಕೆಯನ್ನು ಮತ್ತಷ್ಟು ವರ್ಧಿಸುವ ಬದ್ಧತೆಯನ್ನು ಒತ್ತಿ ಹೇಳಿದರು. ಕೀನ್ಯಾದ ವಿದೇಶಾಂಗ ಸಚಿವ ಮುಸಾಲಿಯಾ ಅವರೊಂದಿಗೆ, ಉಭಯ ದೇಶಗಳ ಸಂಬಂಧಗಳ ಸಂಪೂರ್ಣ ಸಾಮರ್ಥ್ಯವನ್ನು ಅರಿತುಕೊಳ್ಳುವ ಬಗ್ಗೆ ಚರ್ಚಿಸಿದರು. ಮಾಲ್ಟಾದ ವಿದೇಶಾಂಗ ಸಚಿವ ಇಯಾನ್ ಬೋರ್ಗ್ ಅವರೊಂದಿಗಿನ ಸಂವಾದದಲ್ಲಿ, ಡಾ. ಜೈಶಂಕರ್ ಅವರು ಕಡಲ ಉದ್ಯಮದ ಕುರಿತು ಅವರ ಒಳನೋಟಗಳನ್ನು ಶ್ಲಾಘಿಸಿದರು. ಸೀಶೆಲ್ಸ್‌ನ ವಿದೇಶಾಂಗ ಸಚಿವ ಬ್ಯಾರಿ ಫೌರ್ ಅವರೊಂದಿಗೆ, ವಿವಿಧ ವಿಷಯಗಳ ಕುರಿತು ಅವರು ಚರ್ಚಿಸಿದರು. ಡಾ. ಜೈಶಂಕರ್ ಅವರು ನಿನ್ನೆ ಸಂಜೆ ರುವಾಂಡಾದ ವಿದೇಶಾಂಗ ಸಚಿವ ಒಲಿವಿಯರ್ ಅವರೊಂದಿಗೆ ಮಾತುಕತೆ ನಡೆಸಿದರು. ಉಭಯ ದೇಶಗಳ ನಡುವೆ ಆರ್ಥಿಕ ಮತ್ತು ಡಿಜಿಟಲ್ ಸಹಕಾರವನ್ನು ಮತ್ತಷ್ಟು ಬಲಪಡಿಸುವ ಕುರಿತು ಉಭಯ ನಾಯಕರು ಚರ್ಚಿಸಿದರು.

**********

ಲೋಕಸಭೆಯು ಸೋಮವಾರ ಸ್ಪೀಕರ್ ಓಂ ಬಿರ್ಲಾ ಅವರನ್ನು ಪದಚ್ಯುತಗೊಳಿಸುವಂತೆ ಕೋರಿ ನಿರ್ಣಯವನ್ನು ಮಂಡಿಸಲಿದೆ. ಬಜೆಟ್ ಅಧಿವೇಶನದ ಎರಡನೇ ಹಂತವು ಮಾರ್ಚ್ ೯ ರಂದು ಪ್ರಾರಂಭವಾಗಲಿದೆ. ಕಳೆದ ತಿಂಗಳು ನಡೆದ ಬಜೆಟ್ ಅಧಿವೇಶನದ ಮೊದಲ ಹಂತದಲ್ಲಿ, ವಿರೋಧ ಪಕ್ಷವು ಲೋಕಸಭಾ ಕಾರ್ಯದರ್ಶಿಗೆ ಸ್ಪೀಕರ್ ಅವರನ್ನು ಪದಚ್ಯುತಗೊಳಿಸುವಂತೆ ಕೋರಿ ಅವಿಶ್ವಾಸ ನಿರ್ಣಯದ ನೋಟಿಸ್ ಅನ್ನು ಸಲ್ಲಿಸಿತ್ತು. ಸ್ಪೀಕರ್ ಪಕ್ಷಪಾತದಿಂದ ವರ್ತಿಸುತ್ತಿದ್ದಾರೆ ಎಂದು ಆರೋಪಿಸಿತ್ತು. ಇದಕ್ಕೆ ಕಾಂಗ್ರೆಸ್, ಸಮಾಜವಾದಿ ಪಕ್ಷ, ಡಿಎಂಕೆ, ಎಡಪಂಥೀಯ ಮತ್ತು ಇತರ ಸದಸ್ಯರು ಸೇರಿದಂತೆ ೧೧೮ ಸಂಸದರು ಸಹಿ ಹಾಕಿದ್ದರು. ಈ ನೋಟಿಸ್ ಅನ್ನು ಮೂವರು ಕಾಂಗ್ರೆಸ್ ಸದಸ್ಯರಾದ ಮೊಹಮ್ಮದ್ ಜಾವೇದ್, ಕೆ.ಸುರೇಶ್ ಮತ್ತು ಮಲ್ಲು ರವಿ ಮಂಡಿಸಲಿದ್ದಾರೆ. ಈ ನಿಲುವಳಿಯನ್ನು ಅಂಗೀಕರಿಸಿದರೆ, ಓಂ ಬಿರ್ಲಾ ಅವರು ಕಲಾಪಗಳ ಅಧ್ಯಕ್ಷತೆ ವಹಿಸುವುದಿಲ್ಲ. ಬದಲಾಗಿ, ಸದನವು ನಿರ್ಣಯದ ಬಗ್ಗೆ ಚರ್ಚೆ ನಡೆಸುವಾಗ ಅವರು ಸದಸ್ಯರ ನಡುವೆ ಕುಳಿತುಕೊಳ್ಳುತ್ತಾರೆ. ಏತನ್ಮಧ್ಯೆ, ಬಿಜೆಪಿ ಮತ್ತು ಕಾಂಗ್ರೆಸ್ ತಮ್ಮ ಪಕ್ಷದ ಲೋಕಸಭಾ ಸಂಸದರಿಗೆ ವಿಪ್ ಜಾರಿ ಮಾಡಿದ್ದು, ಮಾರ್ಚ್ ೯ ಮತ್ತು ೧೦ರಂದು ಸದನದಲ್ಲಿ ಹಾಜರಿರುವಂತೆ ನಿರ್ದೇಶಿಸಿವೆ.

**********

ಜಾಗತಿಕ ಪೂರೈಕೆ ಸರಪಳಿ ಅಡಚಣೆಗಳ ಹೊರತಾಗಿಯೂ, ಮುಂಬರುವ ಮುಂಗಾರು ಋತುವನ್ನು ನಿಭಾಯಿಸಲು ದೇಶದ ರಸಗೊಬ್ಬರ ದಾಸ್ತಾನು ದೃಢವಾಗಿ, ಸುರಕ್ಷಿತವಾಗಿ ಮತ್ತು ಸಂಪೂರ್ಣವಾಗಿ ಸಜ್ಜಾಗಿದೆ ಎಂದು ಕೇಂದ್ರ ಸರ್ಕಾರ, ರೈತ ಸಮುದಾಯಕ್ಕೆ ಭರವಸೆ ನೀಡಿದೆ. ಒಟ್ಟಾರೆ ರಸಗೊಬ್ಬರ ನಿಕ್ಷೇಪಗಳಲ್ಲಿ ವರ್ಷದಿಂದ ವರ್ಷಕ್ಕೆ ಶೇಕಡ ೩೬.೫ ರಷ್ಟು ಭಾರಿ ಏರಿಕೆ ಕಂಡುಬಂದಿದೆ. ರೈತರು ಸರ್ಕಾರದ ಆದ್ಯತೆಯಾಗಿದ್ದು, ಯಾವುದೇ ಸಂದರ್ಭದಲ್ಲೂ ಅವರ ಹಿತಾಸಕ್ತಿಗಳಿಗೆ ಧಕ್ಕೆಯಾಗುವುದಿಲ್ಲ ಎಂದು ರಸಗೊಬ್ಬರ ಇಲಾಖೆ ತಿಳಿಸಿದೆ. ರೈತರು ಯಾವುದೇ ಭಯವಿಲ್ಲದೆ ಮುಂಗಾರು ಸಿದ್ಧತೆಗಳೊಂದಿಗೆ ಮುಂದುವರಿಯಲು ಪ್ರೋತ್ಸಾಹಿಸಲಾಗುತ್ತದೆ. ಯೂರಿಯಾ, ಡಿಎಪಿ ಮತ್ತು ಎನ್‌ಪಿಕೆ ದಾಸ್ತಾನುಗಳು ಕಳೆದ ವರ್ಷಕ್ಕಿಂತ ಗಮನಾರ್ಹವಾಗಿ ಹೆಚ್ಚಿದ್ದು, ರೈತರಿಗೆ ಸುಗಮ ಪೂರೈಕೆಯನ್ನು ಖಚಿತಪಡಿಸುತ್ತದೆ ಎಂದು ಇಲಾಖೆ ಹೇಳಿದೆ. ಪೆಟ್ರೋಲಿಯಂ ಮತ್ತು ನೈಸರ್ಗಿಕ ಅನಿಲ ಸಚಿವಾಲಯದೊಂದಿಗೆ ನಿಕಟ ಸಮನ್ವಯದೊಂದಿಗೆ ರಸಗೊಬ್ಬರ ಇಲಾಖೆಯು ಆಮದುಗಳ ಆರಂಭಿಕ ಬಿಡುಗಡೆಯನ್ನು ಖಚಿತಪಡಿಸಿಕೊಳ್ಳಲು ನೈಜ ಸಮಯದಲ್ಲಿ ಪರಿಸ್ಥಿತಿಯನ್ನು ಮೇಲ್ವಿಚಾರಣೆ ಮಾಡುವುದನ್ನು ಮುಂದುವರೆಸಿದೆ ಮತ್ತು ಜಾಗತಿಕ ಇಂಧನ ಮಾರುಕಟ್ಟೆಗಳು ವಿಕಸನಗೊಳ್ಳುತ್ತಿದ್ದಂತೆ ತ್ವರಿತ ಪ್ರತಿಕ್ರಿಯೆಗಳನ್ನು ಕಾರ್ಯಗತಗೊಳಿಸಲು ಅದು ಸಿದ್ಧವಾಗಿದೆ ಎಂದು ರಸಗೊಬ್ಬರ ಇಲಾಖೆ ತಿಳಿಸಿದೆ.

**********

ಕೇಂದ್ರ ಸರ್ಕಾರವು ಪ್ರಸಾರ ಪ್ರೇಕ್ಷಕರ ಸಂಶೋಧನಾ ಮಂಡಳಿ-ಬಾರ್ಕ್‌ಗೆ ಸುದ್ದಿ ಟಿವಿ ಚಾನೆಲ್‌ಗಳಿಗೆ ದೂರದರ್ಶನ ರೇಟಿಂಗ್ ಪಾಯಿಂಟ್‌ಗಳ ವರದಿ ಮಾಡುವುದನ್ನು ನಾಲ್ಕು ವಾರಗಳ ಕಾಲ ತಕ್ಷಣವೇ ಸ್ಥಗಿತಗೊಳಿಸುವಂತೆ ನಿರ್ದೇಶಿಸಿದೆ. ಇಸ್ರೇಲ್-ಇರಾನ್ ಸಂಘರ್ಷದ ಮಧ್ಯೆ ಕೆಲವು ಟಿವಿ ಸುದ್ದಿ ಚಾನೆಲ್‌ಗಳು ಅನಗತ್ಯ ಸಂವೇದನೆ ಮತ್ತು ಊಹಾತ್ಮಕ ವಿಷಯವನ್ನು ಪ್ರದರ್ಶಿಸುತ್ತಿವೆ ಎಂದು ಕೇಂದ್ರ ವಾರ್ತಾ ಮತ್ತು ಪ್ರಸಾರ ಸಚಿವಾಲಯ ತಿಳಿಸಿದೆ. ಅಂತಹ ವರದಿಯು ಸಾರ್ವಜನಿಕರಲ್ಲಿ, ವಿಶೇಷವಾಗಿ ಪೀಡಿತ ಪ್ರದೇಶಗಳಲ್ಲಿ ಸ್ನೇಹಿತರು ಮತ್ತು ಕುಟುಂಬದ ಜನರು ಅಥವಾ ಅಲ್ಲಿ ವಾಸಿಸುವವರಲ್ಲಿ ಭಯವನ್ನು ಉಂಟುಮಾಡಬಹುದು ಎಂದು ಸಚಿವಾಲಯ ಹೇಳಿದೆ.

**********

ಪಶ್ಚಿಮ ಏಷ್ಯಾದಲ್ಲಿನ ಸಂಘರ್ಷ ಇಂದು ಎಂಟನೇ ದಿನಕ್ಕೆ ಕಾಲಿಟ್ಟಿದೆ. ಇರಾನ್ ಜೊತೆಗೆ ಯಾವುದೇ ಒಪ್ಪಂದ ಮಾಡಿಕೊಳ್ಳುವುದಿಲ್ಲ ಎಂದು ಅಮೆರಿಕ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ತಿಳಿಸಿದ್ದಾರೆ. ಇದೇ ವೇಳೆ ಬೇಷರತ್ ಶರಣಾಗತಿಗೆ ಇರಾನ್‌ಗೆ ಅವರು ಕರೆ ನೀಡಿದ್ದಾರೆ. ಶರಣಾಗತಿಗೆ ಒಪ್ಪಿಕೊಂಡ ನಂತರ ಇರಾನ್ ಅನ್ನು ಆರ್ಥಿಕವಾಗಿ ಪುನರ್‌ನಿರ್ಮಿಸಲು ಅಮೆರಿಕ ಮತ್ತು ಅದರ ಮಿತ್ರರಾಷ್ಟ್ರಗಳು, ಸಹಾಯ ಮಾಡಲು ಕೆಲಸ ಮಾಡುತ್ತವೆ ಎಂದು ಸಾಮಾಜಿಕ ಜಾಲತಾಣದಲ್ಲಿ ಟ್ರಂಪ್ ತಿಳಿಸಿದ್ದಾರೆ. ಸುದ್ದಿಗಾರರೊಂದಿಗೆ ಮಾತನಾಡಿದ ಶ್ವೇತಭವನದ ಪತ್ರಿಕಾ ಕಾರ್ಯದರ್ಶಿ ಕ್ಯಾರೋಲಿನ್ ಲೀವಿಟ್, ಅಮೆರಿಕವು ಇರಾನ್ ವಾಯುಪ್ರದೇಶವನ್ನು ನಿಯಂತ್ರಿಸುವತ್ತ ಪ್ರಗತಿ ಸಾಧಿಸುತ್ತಿದೆ ಮತ್ತು ನಾಲ್ಕರಿಂದ ಆರು ವಾರಗಳಲ್ಲಿ ಗುರಿಗಳನ್ನು ಸಾಧಿಸುವ ನಿರೀಕ್ಷೆಯಿದೆ ಎಂದು ಹೇಳಿದ್ದಾರೆ. ಈ ನಡುವೆ ಇರಾನ್ ಅಧ್ಯಕ್ಷ ಮಸೌದ್ ಪೆಜೆಶ್ಕಿಯನ್ ಮಾತನಾಡಿ, ಕೆಲವು ದೇಶಗಳು ಅಮೆರಿಕ ಮತ್ತು ಇಸ್ರೇಲ್ ಜೊತೆ ನಡೆಯುತ್ತಿರುವ ಸಂಘರ್ಷವನ್ನು ಪರಿಹರಿಸಲು ಮಧ್ಯಸ್ಥಿಕೆ ಪ್ರಯತ್ನಗಳನ್ನು ಪ್ರಾರಂಭಿಸಿವೆ ಎಂದು ತಿಳಿಸಿದ್ದಾರೆ.

**********

ಬ್ಯಾಡ್ಮಿಂಟನ್‌ನಲ್ಲಿ, ಭಾರತದ ಲಕ್ಷ್ಯ ಸೇನ್ ಬರ್ಮಿಂಗ್‌ಹ್ಯಾಮ್‌ನಲ್ಲಿ ನಡೆಯುತ್ತಿರುವ ಆಲ್ ಇಂಗ್ಲೆಂಡ್ ಓಪನ್ ಚಾಂಪಿಯನ್‌ಶಿಪ್‌ನ ಪುರುಷರ ಸಿಂಗಲ್ಸ್ ವಿಭಾಗದ ಸೆಮಿಫೈನಲ್‌ಗೆ ಲಗ್ಗೆ ಇಟ್ಟಿದ್ದಾರೆ. ನಿನ್ನೆ ರಾತ್ರಿ ನಡೆದ ಕ್ವಾರ್ಟರ್ ಫೈನಲ್‌ನಲ್ಲಿ ಲಕ್ಷ್ಯ ಸೇನ್, ಚೀನಾದ ಲಿ ಶಿಫೆಂಗ್ ಅವರನ್ನು ೨೧-೧೩, ೨೧-೧೮ ಅಂತರದಿಂದ ಮಣಿಸಿದರು. ವಿಶ್ವದ ೧೨ ನೇ ಶ್ರೇಯಾಂಕದ ಲಕ್ಷ್ಯ ಸೇನ್ ಇಂದು ನಡೆಯುವ ಸೆಮಿಫೈನಲ್‌ನಲ್ಲಿ ಕೆನಡಾದ ವಿಕ್ಟರ್ ಲೈ ಅವರನ್ನು ಎದುರಿಸಲಿದ್ದಾರೆ. ಮಿಶ್ರ ಡಬಲ್ಸ್ ಜೋಡಿ ಧ್ರುವ್ ಕಪಿಲಾ ಮತ್ತು ತನಿಶಾ ಕ್ರಾಸ್ಟೊ, ಹಾಂಗ್‌ಕಾಂಗ್‌ನ ಟ್ಯಾಂಗ್ ಚುನ್ ಮ್ಯಾನ್ ಮತ್ತು ತ್ಸೆ ಯಿಂಗ್ ಸೂಟ್ ವಿರುದ್ಧ ನಿವೃತ್ತರಾದ ನಂತರ ಲಕ್ಷ್ಯ ಸೇನ್ ಕಣದಲ್ಲಿ ಉಳಿದಿರುವ ಏಕೈಕ ಭಾರತೀಯ ಆಟಗಾರರಾಗಿದ್ದಾರೆ.

**********

ಜೆಕ್ ಗಣರಾಜ್ಯದಲ್ಲಿ ನಿನ್ನೆ ನಡೆದ ಪ್ರೇಗ್ ಅಂತಾರಾಷ್ಟ್ರೀಯ ಚೆಸ್ ಉತ್ಸವದ ಮಾಸ್ಟರ್ಸ್ ವಿಭಾಗದ ಒಂಬತ್ತನೇ ಮತ್ತು ಅಂತಿಮ ಸುತ್ತಿನಲ್ಲಿ ವಿಶ್ವ ಚೆಸ್ ಚಾಂಪಿಯನ್ ಡಿ. ಗುಕೇಶ್, ಸ್ಪೇನ್‌ನ ಡೇವಿಡ್ ಆಂಟನ್ ಗುಜಾರೊ ಅವರನ್ನು ಮಣಿಸಿದರು. ಭಾರತದ ಅರವಿಂದ್ ಚಿದಂಬರಂ, ಅಂತಿಮ ಸುತ್ತಿನಲ್ಲಿ ಜೆಕ್ ಗ್ರ್ಯಾಂಡ್‌ಮಾಸ್ಟರ್ ಡೇವಿಡ್ ನವರಾ ಅವರನ್ನು

ಸೋಲಿಸಿದ ನಂತರ ೫ ಅಂಕಗಳೊಂದಿಗೆ ಜಂಟಿ ಎರಡನೇ ಸ್ಥಾನ ಪಡೆದರು. ಉಜ್ಬೇಕಿಸ್ತಾನ್‌ನದ ನೋಡಿರ್ಬೆಕ್ ಅಬ್ದುಸತ್ತೊರೊವ್ ಪ್ರಶಸ್ತಿ ವಿಜೇತರಾದರು. ಅಂತಿಮ ಸುತ್ತಿನಲ್ಲಿ ಅಮೆರಿಕದ ಹ್ಯಾನ್ಸ್ ಮೋಕ್ ನೀಮನ್ ಅವರೊಂದಿಗೆ ಡ್ರಾ ಮಾಡಿಕೊಂಡು ೬ ಅಂಕಗಳೊಂದಿಗೆ ಅಜೇಯವಾಗಿ ಮೊದಲ ಸ್ಥಾನ ಪಡೆದರು. ಚಾಲೆಂಜರ್ಸ್ ವಿಭಾಗದಲ್ಲಿ, ಭಾರತದ ದಿವ್ಯಾ ದೇಶ್‌ಮುಖ್, ಜೆಕ್ ಆಟಗಾರ್ತಿ ಹರ್ಬೆಕ್ ಸ್ಟೆಪನ್ ಅವರನ್ನು ಸೋಲಿಸಿ ೫ ಅಂಕಗಳೊಂದಿಗೆ ಮೂರನೇ ಸ್ಥಾನವನ್ನು ಪಡೆದರು. ಜೆಕ್ ಗಣರಾಜ್ಯದ ಫಿನೆಕ್ ವ್ಯಾಂಕ್ಲಾವ್ ೬.೫ ಅಂಕಗಳೊಂದಿಗೆ ಪ್ರಶಸ್ತಿಯನ್ನು ಗೆದ್ದರು, ಸ್ಪೇನ್‌ನ ಡೇನಿಯಲ್ ಯುಫಾ ೬ ಅಂಕಗಳೊಂದಿಗೆ ಎರಡನೇ ಸ್ಥಾನ ಪಡೆದರು. ಗ್ರ್ಯಾಂಡ್‌ಮಾಸ್ಟರ್ ಸೂರ್ಯ ಶೇಖರ್ ಗಂಗೂಲಿ ೪ ಅಂಕಗಳೊಂದಿಗೆ ಐದನೇ ಸ್ಥಾನ ಪಡೆದರು, ಹಂಗೇರಿಯ ಬೆಂಜಮಿನ್ ಅವರು ೪.೫ ಅಂಕಗಳೊಂದಿಗೆ ನಾಲ್ಕನೇ ಸ್ಥಾನ ಪಡೆದರು.

**********

ಐಸಿಸಿ ಪುರುಷರ ಟಿ-೨೦ ವಿಶ್ವಕಪ್ ಕ್ರಿಕೆಟ್‌ನಲ್ಲಿ, ಭಾರತ ನಾಳೆ ಅಹಮದಾಬಾದ್‌ನ ನರೇಂದ್ರ ಮೋದಿ ಕ್ರೀಡಾಂಗಣದಲ್ಲಿ ನಡೆಯಲಿರುವ ಹೈವೋಲ್ಟೇಜ್ ಹಣಾಹಣಿಯಲ್ಲಿ ನ್ಯೂಜಿಲೆಂಡ್ ವಿರುದ್ಧ ಸೆಣಸಲಿದೆ. ಪಂದ್ಯ ನಾಳೆ ಸಂಜೆ ೭ ಗಂಟೆಗೆ ಆರಂಭವಾಗಲಿದೆ. ಸೂರ್ಯಕುಮಾರ್ ಯಾದವ್ ನೇತೃತ್ವದ ಹಾಲಿ ಚಾಂಪಿಯನ್ ಭಾರತ ತಂಡ, ಸೆಮಿಫೈನಲ್‌ನಲ್ಲಿ ಇಂಗ್ಲೆಂಡ್ ವಿರುದ್ಧ ೭ ರನ್‌ಗಳ ರೋಚಕ ಜಯ ಸಾಧಿಸಿದ ನಂತರ ಫೈನಲ್ ತಲುಪಿದೆ.

**********

ಖೇಲೋ ಇಂಡಿಯಾ ಬುಡಕಟ್ಟು ಕ್ರೀಡಾಕೂಟ ಇದೇ ೧೬ ರಿಂದ ಏಪ್ರಿಲ್ ೬ ರವರೆಗೆ ಛತ್ತೀಸ್‌ಗಢದಲ್ಲಿ ನಡೆಯಲಿದೆ ಎಂದು ಕೇಂದ್ರ ಯುವ ವ್ಯವಹಾರ ಮತ್ತು ಕ್ರೀಡಾ ಸಚಿವ ಡಾ.ಮನ್ಸುಖ್ ಮಾಂಡವಿಯಾ ತಿಳಿಸಿದ್ದಾರೆ. ಬುಡಕಟ್ಟು ಕ್ರೀಡಾಕೂಟದ ಉದ್ಘಾಟನಾ ಆವೃತ್ತಿಯು ರಾಯ್‌ಪುರ, ಜಗದಲ್‌ಪುರ ಮತ್ತು ಸರ್ಗುಜಾ ಸೇರಿದಂತೆ ರಾಜ್ಯದ ಮೂರು ನಗರಗಳಲ್ಲಿ ನಡೆಯಲಿದ್ದು, ಅಥ್ಲೆಟಿಕ್ಸ್, ಫುಟ್‌ಬಾಲ್, ಹಾಕಿ, ವೇಟ್‌ಲಿಫ್ಟಿಂಗ್, ಬಿಲ್ಲುಗಾರಿಕೆ, ಈಜು ಮತ್ತು ಕುಸ್ತಿ ಸೇರಿದಂತೆ ಏಳು ಕ್ರೀಡೆಗಳನ್ನು ಒಳಗೊಂಡಿರುತ್ತದೆ. ಕ್ರೀಡೆಗಳನ್ನು ಆಡಲು ಬಯಸುವ ಪ್ರತಿಯೊಬ್ಬ ಯುವಕನಿಗೆ ಅವಕಾಶ ಮತ್ತು ವ್ಯಾಪ್ತಿಯನ್ನು ವಿಸ್ತರಿಸಲು ಈ ಕ್ರೀಡಾಕೂಟ ಆಯೋಜನೆಗೊಳ್ಳಲಿದೆ ಎಂದು ಡಾ.ಮಾಂಡವಿಯಾ ಹೇಳಿದ್ದಾರೆ.ಬುಡಕಟ್ಟು ಪ್ರದೇಶಗಳಲ್ಲಿ

ಹೊರಹೊಮ್ಮುತ್ತಿರುವ ಪ್ರತಿಭೆಗಳ ನೆಲೆಯನ್ನು ಗುರುತಿಸುವಲ್ಲಿ ಮತ್ತು ವಿಕಸಿತ ಭಾರತದ ದೃಷ್ಟಿಕೋನವನ್ನು ಸಾಧಿಸುವಲ್ಲಿ ಕ್ರೀಡೆಗಳು ಪ್ರಮುಖ ಪಾತ್ರ ವಹಿಸುತ್ತವೆ.

*****END*****